www.vijaykarnatakaepaper.com/D
2

ವಿಜಯ ಕರ್ನಾಟಕ

Comments Email Print

# ‘ತೆರೆದ ಗೋದಾಮು ಪದ್ಧತಿಗೆ ಚಿಂತನೆ’

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಬಲ ಬೆಲೆ ಅಡಿ ಉತ್ಪನ್ನ ಖರೀದಿಸಿದರೂ ಅದರ ದಾಸ್ತಾನು ಹಾಗೂ ಮಾರಾಟ ಸವಾಲಿನದ್ದಾಗಿದ್ದು, ಗೋದಾಮುಗಳ ಕೊರತೆ ನೀಗಿಸಲು ‘ತೆರೆದ ಗೋದಾಮು’ ಪದ್ಧತಿ ಅಳವಡಿಕೆಗೆ ಚಿಂತನೆ ನಡೆಸಬೇಕಿದೆ,'' ಎಂದು ಪಶುಸಂಗೋಪನೆ ಸಚಿವ ವೆಂಕಟರಾವ್ ನಾಡಗೌಡ ಹೇಳಿದರು.

‘ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಹಾಗೂ ಸದೃಢ ಮಾರುಕಟ್ಟೆ-ಕೇಂದ್ರದ ನೂತನ ಯೋಜನೆಗಳ ವಿಶ್ಲೇಷಣೆ’ ಕುರಿತು ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಗುರುವಾರ ಮಾತನಾಡಿದರು.

‘‘ಇಸ್ರೇಲ್‌ನಲ್ಲಿ ರೈತರು ಮ್ಯಾನೇಜರ್ ರೀತಿ ಕೃಷಿ ಕಾರ್ಯ ನಡೆಸಿದರೆ ಭಾರತದಲ್ಲಿ ಕೂಲಿಯಾಳಿನಂತೆ ಕೆಲಸ ಮಾಡಬೇಕಿದೆ. ಅಲ್ಲಿನ ಪದ್ಧತಿಯನ್ನು ನಮ್ಮ ವ್ಯವಸ್ಥೆಗೆ ಬಳಸಿಕೊಳ್ಳಲು ಕೆಲ ವರ್ಷಗಳು ಬೇಕಿವೆ. ಕಾಂಟ್ರಾಕ್ಟ್ ಫಾರ್ಮಿಂಗ್‌ಗೆ ಹೆಚ್ಚು ವಿಸ್ತೀರ್ಣದ ಜಮೀನು ಅಗತ್ಯ ಇರುವುದರಿಂದ ಟಾಟಾದಂತಹ ಕಂಪನಿಗಳನ್ನು ಕೃಷಿಯತ್ತ ಆಕರ್ಷಿಸಬೇಕು,'' ಎಂದು ಸಚಿವರು ತಿಳಿಸಿದರು.

**ಕೃಷಿ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆಗೆ ಆದ್ಯತೆ:** ‘‘ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ದರ ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸರಕಾರ ಗಂಭೀರ ಚಿಂತನೆ ನಡೆಸಿದೆ,'' ಎಂದು ಕೃಷಿ ಸಚಿವ ಶಿವಶಂಕರ ರೆಡ್ಡಿ ತಿಳಿಸಿದರು.

‘‘ಎಪಿಎಂಸಿಗಳ ಸುಧಾರಣೆಗೆ ಕೇಂದ್ರ ರೂಪಿಸಿರುವ ತಿದ್ದುಪಡಿಗೆ ರಾಜ್ಯವು ಕೆಲವೊಂದು ಅಂಶಗಳನ್ನು ಸೇರ್ಪಡೆ ಮಾಡಲಿದೆ. ಸಣ್ಣ ರೈತರ ಬೆಳೆಯನ್ನು ಮಾರುಕಟ್ಟೆಗೆ ತಲುಪಿಸಲು ಲಾಜಿಸ್ಟಿಕ್ ವ್ಯವಸ್ಥೆಯನ್ನು ಬಲಪಡಿಸಬೇಕಿದೆ,'' ಎಂದು ಅವರು ಸಲಹೆ ನೀಡಿದರು.

ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮಹೇಶ್ವರರಾವ್, ಆಯುಕ್ತ ಜಿ.ಸತೀಶ್, ನಿರ್ದೇಶಕ ಬಿ.ವೈ.ಶ್ರೀನಿವಾಸ್, ‘ನಫೆಡ್’ ಎಂಡಿ ಸಂಜೀವ್‌ಕುಮಾರ್ ಛಡ್ಡಾ, ಬೆಂಗಳೂರು ಕೃಷಿ ವಿವಿ ಕುಲಪತಿ(ಪ್ರಭಾರ) ಡಾ.ಎಂ.ಎಸ್.ನಟರಾಜು, ರೈತ ಮುಖಂಡರಾದ ಕುರುಬೂರು ಶಾಂತಕುಮಾರ್, ಕೋಡಿಹಳ್ಳಿ ಚಂದ್ರಶೇಖರ್ ಮತ್ತಿತರರಿದ್ದರು.



ಬೆಂಗಳೂರಿನಲ್ಲಿ ಆಯೋಜಿಸಿದ್ದ ‘ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಕಾರ್ಯಾಗಾರದಲ್ಲಿ ಸಚಿವರಾದ ಎನ್.ಎಚ್.ಶಿವಶಂಕರ ರೆಡ್ಡಿ, ವೆಂಕಟರಾವ್ ನಾಡಗೌಡ, ಎಂ.ಸಿ.ಮನಗೂಳಿ, ಕೇಂದ್ರ ಸರಕಾರದ ಹಿರಿಯ ಅಧಿಕಾರಿ ಡಾ.ಅಶೋಕ್ ದಳವಾಯಿ, ಆಯೋಗದ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ ಹಾಜರಿದ್ದರು.

ಕೃಷಿಕರು ವಿಜ್ಞಾನಿಗಳಿಗಿಂತ ಬುದ್ಧಿವಂತರಿದ್ದು ಅವರ ಸಲಹೆಗಳನ್ನು ಪರಿಗಣಿಸಬೇಕು.
**- ಎಂ.ಸಿ.ಮನಗೂಳಿ** ತೋಟಗಾರಿಕೆ ಸಚಿವ

ಎಪಿಎಂಸಿಗಳಲ್ಲಿ ಡ್ಯಾಸ್ ಬೋರ್ಡ್ ಅಳವಡಿಕೆಯಿಂದ ದರಗಳ ನಿಖರತೆ ರೈತರ ಅರಿವಿಗೆ ಬಂದಿದೆ.
**- ಡಾ.ಪ್ರಕಾಶ್ ಕಮ್ಮರಡಿ** ಅಧ್ಯಕ್ಷ, ರಾಜ್ಯ ಕೃಷಿ ಬೆಲೆ ಆಯೋಗ

## ಸಂತೆಗಳಲ್ಲಿ ಕೃಷಿ ಉತ್ಪನ್ನ ಮಾರಾಟಕ್ಕೆ ವ್ಯವಸ್ಥೆ

■ **ವಿಕ ಸುದ್ದಿಲೋಕ** ಬೆಂಗಳೂರು

ಸಣ್ಣ ರೈತರು ಬೆಳೆಯುವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ಗ್ರಾಮೀಣ ಸಂತೆಗಳನ್ನು ಬಳಸಿಕೊಳ್ಳಲು ಕೇಂದ್ರ ಸರಕಾರ ಮುಂದಾಗಿದೆ ಎಂದು ರಾಷ್ಟ್ರೀಯ ಮಳೆಯಾಶ್ರಿತ ಕೃಷಿ ಪ್ರಾಧಿಕಾರದ ಸಿಇಒ ಡಾ.ಅಶೋಕ್ ದಳವಾಯಿ ತಿಳಿಸಿದರು.

‘‘ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಣೆ ಮಾಡಲಾಗದೆ ಆದಾಯದಿಂದ ವಂಚಿತರಾಗುತ್ತಿದ್ದಾರೆ. ಇದಕ್ಕೆ ಪರಿಹಾರ ಒದಗಿಸಲು ಸ್ಥಳೀಯ ಸಂತೆಗಳಲ್ಲೇ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಗ್ರಾ.ಪಂ., ಎನ್‌ಜಿಒ ಹಾಗೂ ಎಪಿಎಂಸಿ ಪ್ರತಿನಿಧಿಗಳ ಸಹಯೋಗದಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಮುಂಬರುವ ಸೆಪ್ಟೆಂಬರ್‌ನಿಂದ ಆರಂಭಿಸಲಾಗುವುದು. ಈ ಕುರಿತು ಆಯಾ ರಾಜ್ಯ ಸರಕಾರಗಳೊಂದಿಗೆ ಚರ್ಚೆ ನಡೆದಿದೆ,'' ಎಂದರು.

**ಮುಂದಿನ ವರ್ಷದಿಂದ ಎಂಎಎಸ್ ಜಾರಿ:** ‘‘ಕೃಷಿ ಬೆಳೆಗಳಿಗೆ ಸರಿಯಾದ ಬೆಲೆ ಸಿಗದಿದ್ದಲ್ಲಿ ಸರಕಾರದ ಬೆಂಬ ಬೆಲೆ ಅಡಿ ಖರೀದಿ ಮಾಡಲಿದೆ. ಇದನ್ನು ಮಾರುಕಟ್ಟೆ ಖಾತರಿ ಯೋಜನೆ(ಎಂಎಎಸ್) ಅಡಿ ರೈತರಿಂದ ನೇರವಾಗಿ ಖರೀದಿಸುವ ವ್ಯವಸ್ಥೆಯನ್ನು ಮುಂದಿನ ವರ್ಷದಿಂದ ಆರಂಭವಾಗಲಿದೆ. ಬೆಲೆ ವ್ಯತ್ಯಾಸ ಪಾವತಿ ಯೋಜನೆ(ಪಿಡಿಪಿಎಸ್), ಖಾಸಗಿ ಖರೀದಿ ಹಾಗೂ ಸಂಗ್ರಹಣೆ ಯೋಜನೆ(ಪಿಪಿಎಸ್ಎಸ್)ಯನ್ನು ಹಾಲಿ ವರ್ಷದಲ್ಲೇ ಜಾರಿಗೆ ತರಲಾಗುತ್ತಿದೆ,'' ಎಂದರು.

‘‘ಆನ್‌ಲೈನ್ ವ್ಯಾಪಾರದಿಂದಾಗಿ ಎಪಿಎಂಸಿಗಳಲ್ಲಿ ದಲ್ಲಾಳಿಗಳ ಕಿರುಕುಳ ಸ್ವಲ್ಪಮಟ್ಟಿಗೆ ತಗ್ಗಿದೆ. ಎಪಿಎಂಸಿಯಲ್ಲಿ ಕೃಷಿ ಉತ್ಪನ್ನಗಳ ಜತೆಗೆ ಜಾನುವಾರು ಮಾರಾಟ ಹಾಗೂ ಗೋದಾಮು ಜಾಲ ವಿಸ್ತರಣೆಗೆ ಅವಕಾಶ ನೀಡಲು ತಿದ್ದುಪಡಿ ಕಾಯಿದೆ ತರಲು ರಾಜ್ಯಗಳಿಂದ ಸಲಹೆ ಕೇಳಲಾಗಿದೆ,'' ಎಂದು ಎಂದು ಹೇಳಿದರು.

ರಮೇಶ್, ಕುಲಾಧಿಪತಿ ಪಿ.ಶ್ಯಾಮರಾಜು, ಸಹಾಯಕ ಡೀನ್ ಡಾ.ಎಸ್.ಎಸ್.ಮೂರ್ತಿ ಇದ್ದಾರೆ

# ‘ರೈತರ ಆದಾಯ ದ್ವಿಗುಣಕ್ಕೆ ವೈಜ್ಞಾನಿಕ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ವೈಜ್ಞಾನಿಕ ನೀತಿಯನ್ನು ರೂಪಿಸುತ್ತಿದೆ ಎಂದು ರಾಷ್ಟ್ರೀಯ ಮಳೆ ಆಶ್ರಿತ ಕೃಷಿ ಪ್ರಾಧಿಕಾರದ ಕಾರ್ಯ ನಿರ್ವಹಣಾಧಿಕಾರಿ ಡಾ.ಅಶೋಕ್ ದಳವಾಯಿ ಹೇಳಿದರು.

ಇದಕ್ಕೆ ಪೂರಕವಾಗಿ ಕೃಷಿ ಅಭಿವೃದ್ಧಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳಿಗೆ ಸಂಬಂಧಿಸಿದ ನೀತಿ ರೂಪಿಸಲಾಗುತ್ತಿದೆ ಎಂದು ನಗರದ ಕೃಷಿ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ‘ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ’ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಹೇಳಿದರು.

2022-23 ರ ಒಳಗೆ ರೈತರ ಆದಾಯ ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ಗುರಿ ಹಾಕಿಕೊಂಡಿದೆ. ಈ ಸಂಬಂಧ ಇತ್ತೀಚೆಗೆ ಕೃಷಿ ಆಯೋಗ ಮತ್ತು ನೀತಿ ಆಯೋಗ ಜಂಟಿ ಸಭೆ ನಡೆಸಿ ಕೆಲವು ಅಂಶಗಳನ್ನು ಪಟ್ಟಿ ಮಾಡಿದೆ ಎಂದು ಅವರು ಹೇಳಿದರು.

**ಆದಾಯ ಹೆಚ್ಚಿಸಲು ಉಪಕ್ರಮ:**

- ದ್ವಿದಳ ಮತ್ತು ಎಣ್ಣೆಕಾಳುಗಳ ಮಾರುಕಟ್ಟೆ ದೇಶದ ಒಳಗೆ ಮತ್ತು ವಿಶ್ವಮಟ್ಟದಲ್ಲಿ ವಿಸ್ತರಣೆ.
- ಸರ್ಕಾರ ನೀಡುವ ಬೆಂಬಲ ಬೆಲೆ ಮತ್ತು ಖಾಸಗಿಯವರು ನೀಡುವ ಬೆಲೆಗಳ ನಡುವಿನ ಅಸಮತೋಲನ ಸರಿಪಡಿಸುವುದು.
- ಅಸಮತೋಲನದ ಬೆಲೆಯನ್ನು ನೇರವಾಗಿ ರೈತರ ಖಾತೆಗಳಿಗೆ ವರ್ಗಾವಣೆ.
- ಭವಿಷ್ಯದಲ್ಲಿ ಪ್ರತಿ 5 ರಿಂದ 6 ಕಿ.ಮೀ ವ್ಯಾಪ್ತಿಯಲ್ಲಿ ನಡೆಯುವ ಸಂತೆಗಳನ್ನು ಕೃಷಿ ಮಾರುಕಟ್ಟೆಯಾಗಿ ಪರಿವರ್ತನೆ. ರೈತರು ಬೆಳೆದ ಬೆಳೆಗಳನ್ನು ಅಲ್ಲಿಯೇ ಮಾರುವ ವ್ಯವಸ್ಥೆ.
- ಪೌಷ್ಟಿಕಾಂಶದಿಂದ ಕೂಡಿದ ಬೆಳೆಗಳನ್ನು ಬೆಳೆಯುವ ಬಗ್ಗೆ ಆದ್ಯತೆ. ಇದಕ್ಕೆ ಉತ್ತಮ ಬೆಲೆ ಸಿಗುವಂತೆ ಮಾಡಲು ವಿಶೇಷ ಕ್ರಮ.

**ಮಾರುಕಟ್ಟೆ ವ್ಯವಸ್ಥೆ:** ರಾಜ್ಯದಲ್ಲಿ ಪ್ರಮುಖ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸಿ, ಅವುಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡುವ ಚಿಂತನೆ ಇದೆ ಎಂದು ಕೃಷಿ ಸಚಿವ ಎನ್.ಎಚ್. ಶಿವಶಂಕರರೆಡ್ಡಿ ತಿಳಿಸಿದರು.

ಇದಕ್ಕೆ ಪೂರಕವಾಗಿ ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರ ಉದ್ದೇಶಿಸಿದೆ. ಕೃಷಿ ಲಾಭದಾಯಕವಾಗಬೇಕಾದರೆ ರೈತರು ಬೆಳೆಗಳಿಗೆ ಹಾಕುವ ಬಂಡವಾಳವನ್ನು ಕಡಿಮೆ ಮಾಡುವತ್ತ ಕೃಷಿ ತಜ್ಞರು ಹಾಗೂ ವಿಜ್ಞಾನಿಗಳು ಚಿಂತಿಸಬೇಕಾದ ಅಗತ್ಯವಿದೆ ಎಂದರು.

‘ಇತರ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಕೃಷಿ ಉತ್ಪಾದನೆ ಪ್ರಮಾಣ ಕಡಿಮೆ. ರೈತರ ಹೊರೆ ಇಳಿಸುವುದರ ಜೊತೆಗೆ ಕೃಷಿ ಉತ್ಪಾದನೆ ಹೆಚ್ಚಿಸಬೇಕಾಗಿದೆ. ರೈತರ ಸಾಲ ಹೊರೆ ತಗ್ಗಿಸುವ ಉದ್ದೇಶದಿಂದ ಸಾಲ ಮನ್ನಾ ಮಾಡಲಾಗಿದೆ’ ಎಂದು ಅವರು ತಿಳಿಸಿದರು.

ಪಶುಸಂಗೋಪನ ಸಚಿವ ವೆಂಕಟರಾವ್ ನಾಡಗೌಡ ಮಾತನಾಡಿ, ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಕಟಿಸಿರುವ ಬೆಂಬಲ ಬೆಲೆ ರೈತರಿಗೆ ಸ್ವಲ್ಪ ಮಟ್ಟಿಗೆ ಸಮಾಧಾನ ತಂದಿದೆ. ಇದನ್ನು ರೈತರಿಗೆ ಉಪಯೋಗ ಆಗುವ ರೀತಿಯಲ್ಲಿ ಈ ಯೋಜನೆ ಕಾರ್ಯಗತ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಬೆಲೆ ಆಯೋಗದ ಪೂರಕ ವರದಿ, ಸುಸ್ಥಿರ ಸಿರಿಧಾನ್ಯ ಕೃಷಿಯಿಂದ ಆದಾಯ ಕುರಿತ ಪುಸ್ತಕ ಬಿಡುಗಡೆ ಮಾಡಲಾಯಿತು. ತೋಟಗಾರಿಕಾ ಸಚಿವ ಎಂ.ಸಿ. ಮನಗೂಳಿ, ಕೃಷಿ ಇಲಾಖೆ ಕಾರ್ಯದರ್ಶಿ ಮಹೇಶ್ವರರಾವ್, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಟಿ.ಎನ್.ಪ್ರಕಾಶ್ ಕಮ್ಮರಡಿ, ಮಹಾರಾಷ್ಟ್ರ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪಾಶಾ ಪಟೇಲ್ ಮಾತನಾಡಿದರು.